## ಕವಿತೆ




# ಸಿದ್ಧಲಿಂಗ ಪಟ್ಟಣಶೆಟ್ಟಿ

ಕಲೆ: ಎಸ್.ವಿ. ಹೂಗಾರ್




## ದೇವ ಸಂಕಟ

ನನ್ನಖಂಡ ಬ್ರಹ್ಮಾಂಡ ಮಂಡಲ
ವರ್ತುಳ ಕೋಶ ಕಾಂಡದೊಳಗೆ
ಸರ್ವ ದೇಶ ಭಾಷೆಗಳ ಎಲ್ಲ ಶಾಖೆಗಳಲ್ಲಿ
ಅವರವರ ಮಿತಿಯಲ್ಲಿ ಭಾವದಲಿ
ಅವರವರದೇ ರೀತಿ ಶಕ್ತ್ಯಾನುಸಾರ
ಪುಡಿಗಾಸು ಬಟ್ಟೆ ಪ್ರಸಾದ ಕಾಣಿಕೆ ಸಮರ್ಪಣೆ ಜೊತೆಗೆ
ಅರ್ಪಿಸುತ್ತಾರೆ ಸಕಲ ವಯದ ಮನೋಜಗದ
ಹಾಡುಗರು ಭಜನಿಗರು ಕುಣಿವವರು ಕೇಳುಗರು
ಮೂಕ ಜೀವರು ಮೌನ
ಪ್ರಾರ್ಥನೆ, ಬೇಡಿಕೆ, ಪ್ರಶ್ನೆ, ಆಕಾಂಕ್ಷೆ, ಹಂಬಲ,
ದೈನ್ಯ, ಕಾಟ, ಲೇಖನ ಇತ್ಯಾದಿ ಇತ್ಯಾದಿ
ಅನುದಿನ ಅನುಕ್ಷಣ

ನನ್ನ ಅಸಂಖ್ಯ ಶಿಷ್ಯ ಕೋಟಿ
ಹಗಲಿರುಳು ಓದಿದರೂ ಮುಗಿಯದಾಗಿವೆ
ಚೀಟಿ, ಕಾಗದ, ದನಿ, ಉದ್ವೇಗ, ಆವೇಗ
ಯಾರ ಬೇಡಿಕೆ ಯಾವ ದಿನ ಹೇಗೆ ಪರಿಹರಿಸಲಿ
ಅರ್ಥವಿಸಿಕೊಳ್ಳಲಿ
ನನ್ನ ಕೊರೆಯುತ್ತಿರುವ
ಈ ನನ್ನ ಹತಾಶ ಬೇಡಿಕೆಯ ಎರಡಂಚ ಕತ್ತಿ
ಯಾರ ಬಳಿ ಇಡಲಿ?
ಯಾರಿಗೆ ಹೇಳಿ ಹಗುರಾಗಲಿ?

## ಸತ್ಯ

ಮನಸಿಗೆ ತನುವಿಗೆ ತಗಲುವಂತೆ
ಆಗಾಗ ಕವಿತೆಗೂ
ರೋಗ ರುಜಿನಾದಿ ಕಾಯಿಲೆ ಕಸಾರಿಕೆ
ಹಳವಂಡ ನೋವು ಜಂಜಡ
ಅಸಮಾಧಾನ ವ್ಯಥಾಪುಂಜ
ಪರಾಜಯ ಪರಾಧೀನ ಭಾವ
ಬಾಧಿಸುತ್ತವೆ ಕಾಡುತ್ತವೆ ಚುಚ್ಚುತ್ತವೆ
ಹೊರಬರಲು ಓಡಿಹೋಗಲು ಮುಗಿದುಬಿಡಲು
ಬಯಸುತ್ತವೆ ಹಂಬಲಿಸುತ್ತವೆ ಕನಲುತ್ತವೆ

ಯಾರಿಗೆ ಹೇಳಬೇಕು ಹೇಳಿ
ಕೊಳ್ಳಬೇಕು ಮತ್ತೆ
ಕವಿತೆಗೇ ಮೊರೆ ಹೋಗಬೇಕು.

